**ಅಸಲು ದಾವ ಸಂಖ್ಯೆ:947/2013**

**ಡಿ ಡಬ್ಲ್ಯೂ -1**

**ಗೌರವಾನ್ವಿತ 3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಬೆಳಗಾವಿ.**

**ದಿಃ 18-02-2020 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ನಂ.1 ಮತ್ತು 2 ನೆದ್ದವರ ಪರ - ಶ್ರೀ ಕೆ.ಎನ್.ಎಸ್. ವಕೀಲರಿಂದ.**

ಭೀಮರಾವ್, ಶಂಕರ, ರಾಮಚಂದ್ರ ಮತ್ತು ಕಲ್ಲಪ್ಪ ರವರು ಸಹೋದರರು ಎಂದರೆ ಸರಿ. 1992 ನೇ ಸಾಲಿನಲ್ಲಿ ನಮ್ಮ ನಮ್ಮ ನಡುವೆ ಪಾಲು ವಾಟನಿ ಆಗಿದೆ ಎಂದರೆ ಸರಿಯಲ್ಲ . ದಿನಾಂಕ 02-07-1992 ರಲ್ಲಿ ಸುಮತಿ ಪಾಟೀಲ್ ನೋಟರಿಯವರ ಕಡೆ ವಾಟನಿ ಮಾಡಿಕೊಂಡ ಬಗ್ಗೆ ಕಾಗದ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನೋಟರಿಯವರು ಮಾಡಿಕೊಟ್ಟ ಕಾಗದ ಆಧಾರದ ಮೇಲೆ ಡಯರಿ ನಂ.986 ರ ಪ್ರಕಾರ ನಮ್ಮ ಹೆಸರುಗಳು ಆಸ್ತಿಗಳಲ್ಲಿ ನಮೂದಾಗಿರುತ್ತವೆ ಎಂದರೆ ಸರಿಯಲ್ಲ. ಡಯರಿ ನಂ.986 ನೆದ್ದನ್ನು ಪ್ರಶ್ನೆ ಮಾಡಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ. 1992 ನೇ ಸಾಲಿನಲ್ಲಿ ಪಾಲು ವಾಟನಿ ಆಗಿದ್ದರಿಂದ ಈ ದಾವೆಯಲ್ಲಿ ನಿಮ್ಮನ್ನು ಪಾರ್ಟಿ ಮಾಡಿರಲಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಗಳಲ್ಲಿ ಸಮಪಾಲು ಬೇಕು ಎಂದು ಅರ್ಜಿ ಹಾಕಿರುತ್ತೇನೆ. 1992 ನೇ ಸಾಲಿನಲ್ಲಿ ವಾಟನಿ ಪತ್ರ ಮಾಡಿಕೊಂಡಿರುವುದರಿಂದ ನಿಮಗೆ ಯಾವುದೇ ಸಮಪಾಲು ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನ ಜಂಟಿ ಸ್ವಾಧೀನದಲ್ಲಿ ಇರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1992 ನೇ ಸಾಲಿನಿಂದ ನಾನು ಯಾವುದೇ ಸ್ವಾ ಧೀನದಲ್ಲಿ ಇರದೆ ಇದುದ್ದರಿಂದ ನನಗೆ ಈ ದಾವೆಯಲ್ಲಿ ಯಾವುದೇ ಹಿಸ್ಸೆ ಬರುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು - ಪ್ರತಿವಾದಿ ನಂ.6 ಮತ್ತು 7 ನೆದ್ದವರ ಪರ ಆರ್.ಕೆ.ಪಿ ವಕೀಲರಿಂದ**

6 ಮತ್ತು 7 ನೇ ಪ್ರತಿವಾದಿಗಳ ಹೆಸರಿನಲ್ಲಿರುವ ಆಸ್ತಿಗಳಿಗೆ ನನ್ನ ತಕರಾರು ಇರುವುದಿಲ್ಲ ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆ.ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ. ಸರಿಯಿದೆ.**

**ಸಹಿ/-**

**3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**

**ಬೆಳಗಾವಿ.**